ನಿ-330 - (91)

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ ಬಸವಂತರಾಯ ಇವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:**

ರಾಜ್ಯ ಸರ್ಕಾರ 2020-21ರ ಆಯವ್ಯಯದಲ್ಲಿ ಜಿಲ್ಲೆಗೊಂದು ಗೋಶಾಲೆ ಸ್ಥಾಪನೆ ಮಾಡಲಾಗುವುದೆಂದು ಘೋಷಿಸಿದ್ದು, ಈ ಗೋಶಾಲೆಗಳ ಸ್ಥಾಪನೆಗೆ ಸರ್ಕಾರ 15 ಕೋಟಿ ಅನುದಾನ ಮೀಸಲು ಇಟ್ಟಿದೆ, ರಾಜ್ಯ 31 ಜಿಲ್ಲೆಗಳಲ್ಲಿ ಯಾವುದೇ ಜಿಲ್ಲೆಗಳಲ್ಲಿ ಇನ್ನೂ ಗೋಶಾಲೆ ಪ್ರಾರಂಭವಾಗಿಲ್ಲ.

ಈ ವರೆಗೆ ಕೇವಲ 6 ಜಿಲ್ಲೆಗಳಲ್ಲಿ ಗೋಶಾಲೆ ಸ್ಥಾಪನೆಗೆ ಜಮೀನು ಗುರುತಿಸಿ, ಪಡೆಯುವ ಪ್ರಕ್ರಿಯೆ ಪ್ರಾರಂಭವಾಗಿದೆ. ಇನ್ನುಳಿದ ಜಿಲ್ಲೆಗಳಲ್ಲಿ ಗೋಶಾಲೆ ಸ್ಥಾಪನೆಗೆ ಜಮೀನು ಗುರುತಿಸಿ ಭೂಸ್ವಾಧೀನ ಪಡೆಯುವ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ರಾಜ್ಯದಲ್ಲಿ ಗೋ ಸಂರಕ್ಷಣಾ ಕಾಯಿದೆಯನ್ನು ಜಾರಿಗೆ ತಂದ ನಂತರ ವಯಸ್ಸಾದ ಗೋವುಗಳ ಮಾರಾಟಕ್ಕೆ ಎದುರಾದ ಸಮಸ್ಯೆಗಳಿಗೆ ಗೋಶಾಲೆಗಳು ಪರಿಹಾರ ನೀಡಬಹುದೆಂದು ರೈತರು ಭಾವಿಸಿದ್ದರು ಆದರೆ, ಈ ಪರ್ಯಾಯ ವ್ಯವಸ್ಥೆ ಇಲ್ಲದೆ ರೈತರು ವಯಸ್ಸಾದ ಹಸುಗಳನ್ನು ಮತ್ತು ಹೋರಿಕರುಗಳನ್ನು ಗೋಶಾಲೆಗಳ ಮುಂಭಾಗದಲ್ಲಿ ಮತ್ತು ಕೆಲವರು ಬೀದಿಯಲ್ಲಿ ಬಿಟ್ಟು ಹೋಗುತ್ತಿದ್ದಾರೆ. ಪ್ರತಿದಿನ ರೈತನಿಗೆ ಒಂದು ಗಂಡುಕರು ಸಾಕಲು ಮತ್ತು ವಯಸ್ಸಾದ ಹಸು ಪೋಷಿಸಲು 50.00 ರೂ ವೆಚ್ಚವಾಗುತ್ತಿದೆ. ಈ ವೆಚ್ಚವನ್ನು ರೈತನಿಗೆ ಭರಿಸಲು ಸರ್ಕಾರ ಯಾವುದೇ ಕ್ರಮ ಜರುಗಿಸದೆ ಇರುವುದರಿಂದ ರಾಜ್ಯದ ರೈತರ ಹಿತದೃಷ್ಟಿಯಿಂದ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಹೇಳಿಕೆ:**

2021-22ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 30 ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಗಳನ್ನು ಪ್ರಾರಂಭಿಸಲು 1500.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿತ್ತು. ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಗೋಶಾಲೆ ಪ್ರಾರಂಭಿಸಲು ಸರ್ಕಾರದ ಆದೇಶ ಸಂ:ಇ-ಪಸಂಮೀ/65/ ಪಪಾಯೋ/2021, ದಿನಾಂಕ:11.08.2021 ರಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಒಂದು ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸಲು ಪ್ರತಿ ಜಿಲ್ಲೆಗೆ ರೂ.36.00 ಲಕ್ಷಗಳಂತೆ ಒಟ್ಟು 1080.00 ಲಕ್ಷಗಳನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದೆ.

--2

ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸಲು ಈಗಾಗಲೇ 19 ಜಿಲ್ಲೆಗಳಲ್ಲಿ ಸರ್ಕಾರಿ/ಗೋಮಾಳ/ಪಶುಪಾಲನಾ ಇಲಾಖೆಯ ಅಧೀನದ ಕ್ಷೇತ್ರಗಳ ಜಮೀನುಗಳನ್ನು ಗುರುತಿಸಲಾಗಿದೆ. (ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ) ಅಲ್ಲದೆ 11 ಜಿಲ್ಲೆಗಳಲ್ಲಿ ಸರ್ಕಾರಿ/ಗೋಮಾಳ ಜಮೀನುಗಳನ್ನು ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. (ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ)

ಮುಂದುವರೆದು, ಚಿಕ್ಕಮಗಳೂರು, ಗದಗ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಆದಷ್ಟು ಬೇಗ ಸರ್ಕಾರಿ ಗೋಶಾಲೆಗಳನ್ನು ಪ್ರಾರಂಭಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಹಾಗೆಯೇ, ರಾಜ್ಯದಲ್ಲಿ 190 ಖಾಸಗಿ ಗೋಶಾಲೆಗಳಿದ್ದು ಈ ಗೋಶಾಲೆಗಳಲ್ಲಿಯೂ ಸಹ ರೈತರು ತಮ್ಮ ನಿರುಪಯುಕ್ತ, ವಯಸ್ಸಾದ ಹಾಗೂ ರೋಗಗ್ರಸ್ತ ಜಾನುವಾರುಗಳ ನಿರ್ಹವಹಣೆಗಾಗಿ ಬಿಡಬಹುದಾಗಿದೆ. ಸರ್ಕಾರದಿಂದ ಇಂತಹ ಜಾನುವಾರುಗಳು/ಗೋಶಾಲೆಗಳ ನಿರ್ವಹಣೆಗಾಗಿ 2021-22ನೇ ಸಾಲಿನಲ್ಲಿ ಜಿಲ್ಲಾ ಪ್ರಾಣಿದಯಾ ಸಂಘಗಳಿಂದ ಶೀಫಾರಸ್ಸುಗೊಂಡು ಬಂದಿರುವ 139 ಗೋಶಾಲೆಗಳಿಗೆ ನವೆಂಬರ 2021ರ ವರೆಗೆ ರೂ.2,79,41,587-00 ಅನುದಾನ ನೀಡಲಾಗಿದೆ.

**ಇ-ಪಸಂಮೀ 333 ಸಲೆವಿ 2021**

**ಪ್ರಭು ಬಿ. ಚವ್ಹಾಣ್**
**ಪಶುಸಂಗೋಪನೆ ಸಚಿವರು,**

<u>ಅನುಬಂಧ-1</u>

**ಸರ್ಕಾರಿ ಗೋಶಾಲೆ ನಿರ್ಮಿಸಲು 19 ಜಿಲ್ಲೆಗಳಲ್ಲಿ ಜಮೀನು ಪಡೆದಿರುವ ವಿವರಗಳು**

| ಕ್ರಸಂ | ಜಿಲ್ಲೆಗಳು | ಜಮೀನಿನ ವಿವರ | ಎಕರೆ |
|---|---|---|---|
| 1 | ಬೆಂಗಳೂರುನಗರ | ಹೆಸರಘಟ್ಟದ ಹೋಬಳಿ, ದಾಸೇನಹಳ್ಳಿ ಸರ್ವೆ.ನ.36 ರಲ್ಲಿ ಲಭ್ಯವಿರುವ 50 ಎಕರೆ ಜಮೀನಲ್ಲಿ 25 ಎಕರೆ ಹಂಚಿಕೆ ಮಾಡಲಾಗಿದೆ. | 25.00 |
| 2 | ಬೆಂಗಳೂರು ಗ್ರಾಮಾಂತರ | ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕೊಡಿಗೇಹಳ್ಳಿ 10 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಲಾಗಿದೆ. | 10.00 |
| 3 | ತುಮಕೂರು | ಶಿರಾ ತಾಲ್ಲೂಕಿನಲ್ಲಿ ಹುಲಕುಂಟೆ ಹೋಬಳಿ, ಚಿಕ್ಕಬಾಣಗೇರೆ ಗ್ರಾಮದ ಸ.ನ.204 ರಲ್ಲಿ 9.2 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಲಾಗಿದೆ. RTC ಪಡೆಯಲಾಗಿದೆ. | 9.20 |
| 4 | ಚಿಕ್ಕಬಳ್ಳಾಪುರ | ನಾಗಿರೆಡ್ಡಿಹಳ್ಳಿ, ಭುಶಟ್ಟಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲುಕು. ಸ.ನ.41 ರಲ್ಲಿ 9.38 ಎಕರೆ. | 9.38 |
| 5. | ಹಾಸನ | ಅರಸೀಕೆರೆ ತಾಲುಕು ಹಬ್ಬನಗಟ್ಟ ಕಾವಲು, ಬೋರನಕೊಪ್ಪಲು, ಸ.ನ.2/70 ರಲ್ಲಿ 20-25 ಎಕರೆ. | 25.00 |
| 6. | ಬಾಗಲಕೋಟೆ | ಬಾಗಲಕೋಟೆ ತಾಲುಕು ಶೀಗಿಕೇರಿ ಗ್ರಾಮ, ಸ.ನ.100/100/2ರ ಕ್ಷೇತ್ರದ 12.30 ಎಕರೆಯಲ್ಲಿ 9.20. | 9.20 |
| 7. | ಮೈಸೂರು | ವರುಣ ಹೋಬಳಿ, ಆಯರಹಳ್ಳಿ, ಮೈಸೂರು ಸ.ನ.212 ರಲ್ಲಿ 10 ಎಕರೆ. | 10.00 |
| 8. | ಚಿಕ್ಕಮಗಳೂರು | ಕಡೂರು ತಾಲುಕು, ಎಮ್ಮೆದೊಡ್ಡಿಭಾಗದಲ್ಲಿಇಲಾಖೆಯಅಧೀನದಲ್ಲಿರುವಗೋಸದನದಜಾಗಸ.ನ.70 ರಲ್ಲಿ,11ಎಕರೆ. | 11.00 |
| 9. | ದಕ್ಷಿಣಕನ್ನಡ | ಕಡಬತಾಲುಕು, ರಾಮಕುಂಜಗ್ರಾಮ, ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲ ಕ್ಷೇತ್ರ ಸ.ನ.233,299/1,2,3 ಒಟ್ಟು 98.45 ಎಕರೆ | 98.45 |
| 10 | ರಾಯಚೂರು | ರಾಯಚೂರು ತಾಲುಕು ಯರಗೇರಾಹೋಬ, ಜಂಬಲದಿನ್ನಿಗ್ರಾಮ, ಸ.ನ. 138/ಎ, ರಲ್ಲಿ 6.00 ಎಕರೆ. | 6.00 |
| 11. | ಹಾವೇರಿ | ಗುತ್ತಲ ಕುರಿ ಸಂವರ್ಧನಾ ಕೇಂದ್ರದ ಸ.ನ. 371 -374 ರಲ್ಲಿ 25 ಎಕರೆ | 25.00 |
| 12. | ಗದಗ | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ಪಿಪಿಪಿ ಮಾದರಿಯಲ್ಲಿ ಹಟ್ಟಿ ಗ್ರಾಮ,ಸ.ನ.179 10 ಎಕರೆ. | 10.00 |
| 13. | ಬಳ್ಳಾರಿ | ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ, ತಾಲುಕು, ವರ್ಲಹಳ್ಳಿ ಗ್ರಾಮದ ಸ.ನ. 39 ರಲ್ಲಿ 10.52 ಎಕರೆ ಪೈಕಿ9.88 ಎಕರೆ | 9.88 |
| 14. | ಕೊಪ್ಪಳ | ಯಲಭುರ್ಗಾತಾಲುಕು,ಭೇವೂರಗ್ರಾಮ, ಗಾಯರಾಣ ಸ.ನ.151 ರಲ್ಲಿ 10.00 ಎಕರೆ | 10.00 |
| 15. | ದಾವಣಗೆರೆ | ಹೊಸಹಳ್ಳಿಗ್ರಾಮ, ಆನೆಗೋಡುಹೋಬಳಿ, ದಾವಣಗೆರೆ ತಾಲ್ಲೂಕು. ಸ.ನ.35 ರಲ್ಲಿ 7.00ಎಕರೆ | 7.00 |
| 16. | [illegible] | [illegible] | [illegible] |
| 17 | ಚಿತ್ರದುರ್ಗ | ಕುರಡಿ ಹಳ್ಳಿಗ್ರಾಮ, ಕಸಬಾ ಹೋಬಳಿ, ಚೆಳ್ಳಕೆರೆ ತಾಲ್ಲೂಕು, ಸ.ನ.27 ರಲ್ಲಿ 9.36 ಎಕರೆ | 9.36 |
| 18. | ಬೀದರ್ | ಬಸಂತಪೂರ ಗ್ರಾಮದ ಸರ್ಕಾರಿ ಗಾಯರಾಣ ಭೂಮಿ ಸ,ನ.93 ರಲ್ಲಿ 39.08 ಎಕರೆ | 39.08 (ಅಧೀನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಭೂ ಮಂಜುರಾತಿ-3, ಇವರಿಂದ ಪೂರ್ವಾನು ಮೋದನೆ ನೀಡಿದ್ದಾರೆ.) |
| 19. | ರಾಮನಗರ | ವಂದಾರಗುಪ್ಪೆ ಗ್ರಾಮ, ಚೆನ್ನಪಟ್ಟಣ ತಾಲ್ಲೂಕು.ಸ.ನ.20 ರಲ್ಲಿ 8.00ಎಕರೆ ಜಮೀನು | ಜಿಲ್ಲಾಧಿಕಾರಿಗಳು 8.00 ಎಕರೆ ಜಮೀನನ್ನು ಗೋಶಾಲೆಗಾಗಿ ಕಾಯ್ದಿರಿಸಲು ಆದೇಶ ನೀಡಿರುತ್ತಾರೆ. |

ಅನುಬಂಧ-2

## ಸರ್ಕಾರಿ ಗೋಶಾಲೆ ನಿರ್ಮಿಸಲು 11 ಜಿಲ್ಲೆಗಳಲ್ಲಿ ಜಮೀನು ಗುರುತಿಸುವ ಪ್ರಕ್ರಿಯೆಯ ವಿವರಗಳು

| ಕ್ರ ಸಂ | ಜಿಲ್ಲೆಗಳು | ಸರ್ಕಾರಿ ಗೋಶಾಲೆ ಜಮೀನಿನ ವಿವರ | ಎಕರೆ | ಷರಾ |
|---|---|---|---|---|
| 1. | ಶಿವಮೊಗ್ಗ | ನಗರಸಭೆ ವ್ಯಾಪ್ತಿಯರಾಗಿಗುಡ್ಡ, ಕಸಬಾ ಹೋಬಳಿ ಸ.ನ.76 ರಲ್ಲಿ 5.00ಎಕರೆ | 5.00 | ಜಮೀನಿನ ಮಂಜೂರಾತಿಯ ಕಡತ AC ಕಛೇರಿಯಲ್ಲಿರುತ್ತದೆ. |
| 2. | ಮಂಡ್ಯ | ಮದ್ದೂರು ತಾಲ್ಲೂಕು ಚಿಕ್ಕ ಅಂಕನಹಳ್ಳೀ ಗ್ರಾಮ ಸ.ನ.804/6ರಲ್ಲಿ 10.00 ಎಕರೆ | 10.00 | ಕಡತ ತಹಶೀಲ್ದಾರ್ ಮದ್ದೂರು ತಾಲ್ಲೂಕು ರವರ ಕಛೇರಿಯಲ್ಲಿರುತ್ತದೆ. |
| 3. | ಉಡುಪಿ | ಹೆಬ್ರಿ ತಾಲ್ಲೂಕು, ಕೆರೆಬೆಟ್ಟು ಗ್ರಾಮ, ಸ.ನ.79/2 ರಲ್ಲಿ 13.24 ಎಕರೆ | 13.24 | ಕಡತ ಕಂದಾಯ ಇಲಾಖೆಯಲ್ಲಿದೆ. |
| 4 | ಕೊಡಗು | ಮಡಿಕೇರಿತಾಲ್ಲೂಕು, ನಿಡುಗಣೆಗ್ರಾಮ, ಸ.ನ.22/1 ರಲ್ಲಿ20.84 ಎಕರೆ | 20.84 | ಜಮೀನಿನ ಮಂಜೂರಾತಿಗಾಗಿ ಕಡತ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿರುತ್ತದೆ. ಸ್ಥಳ ಪರಿಶೀಲನೆ ಮಾಡುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. |
| 5 | ಬೆಳಗಾವಿ | ಹುಕ್ಕೇರಿ ತಾಲ್ಲೂಕು ಬೆಳವಿ ಗ್ರಾಮ, ಸ.ನ.645 ರಲ್ಲಿ 19.04 ಎಕರೆ | 19.04 | ಜಿಲ್ಲಾಧಿಕಾರಿಗಳು ಪ್ರಧಾನಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಭೂಮಿ ಮಂಜೂರಾತಿಗಾಗಿ ದಿ:08-11-21ರಂದು ಪತ್ರ ಸಲ್ಲಿಸಿರುತ್ತಾರೆ. |
| 6. | ಉತ್ತರಕನ್ನಡ | ದುಸಗಿ ಗ್ರಾಮ, ಹಳಿಯಾಳ ತಾಲ್ಲೂಕು ಸ.ನ.173 ರಲ್ಲಿ 20.00 ಎಕರೆ | 20.00 | ಜಿಲ್ಲಾಧಿಕಾರಿಗಳ ತಂಡ ಮೂಲಭೂತ ಕೆಲಸಗಳ ನಿರ್ಮಾಣಕ್ಕೆ ಭೂಮಿ ವೀಕ್ಷಣೆ ಮಾಡಿರುತ್ತಾರೆ ಮತ್ತು ಕಡತ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಇರುತ್ತದೆ. |
| 7. | ಧಾರವಾಡ | ಮದನ ಬಾವಿಗ್ರಾಮ, ತೇಗೂರು ಹತ್ತಿರ, ಸ.ನ.214 ರಲ್ಲಿ 10.00 ಎಕರೆ. | 10.00 | ದಿ:16-11-21 ರಂದು ಜಿಲ್ಲಾಧಿಕಾರಿಗಳ ತಂಡ ಸ್ಥಳ ಪರಿಶೀಲನೆ ಮಾಡಿ, ಮೂಲಭೂತ ಕಾರ್ಯಗಳನ್ನು ಪ್ರಾರಂಭಮಾಡಲು ಸೂಚಿಸಿರುತ್ತಾರೆ. |
| 8. | ವಿಜಯಪುರ | ವಿಜಯಪುರ ತಾಲ್ಲೂಕು, ಭೂತನಾಳ ಗ್ರಾಮ, ಸ.ನ.217 ರಲ್ಲಿ 10.26 ಎಕರೆ | 10.26 | ಜಮೀನು ಹಸ್ತಾಂತರಿಸುವ ಪ್ರಕ್ರಿಯೆ ಕುರಿತಂತೆ ಜಿಲ್ಲಾಧಿಕಾರಿಗಳು ಪೂರ್ವಾನು ಮೋದನೆಗಾಗಿ ಪ್ರದಾನಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆಯುಕ್ತರು, ನಗರಸಭೆ ರವರ ತಂಡ ಮೂಲಭೂತಕಾರ್ಯಗಳ ಕುರಿತು ವೀಕ್ಷಿಸಿದ್ದಾರೆ. |
| 9. | ಕಲಬುರಗಿ | ಕಲಬುರಗಿ ತಾಲ್ಲೂಕು, ಮಿಣಜಗಿ ಗ್ರಾಮ ಸ.ನ.23 ರಲ್ಲಿ 56 ಎಕರೆಯಲ್ಲಿ (25 ಎಕರೆ) | 25.00 | ಕಡತ ತಹಶೀಲ್ದಾರ್, ಕಲಬುರಗಿ ರವರ ಕಛೇರಿಯಲ್ಲಿರುತ್ತದೆ. |
| 10. | ಯಾದಗಿರಿ | ಬೇಣಚಿಗಡ್ಡಿ ಗ್ರಾಮ, ಹುಣಸಗಿ ತಾಲ್ಲೂಕು ಸ.ನ.28 ರಲ್ಲಿ 10.00 ಎಕರೆ. | 10.00 | ಕಡತವು ಜಿಲ್ಲಾಧಿಕಾರಿಗಳ ಕಛೇರಿಯ ಹಂತದಲ್ಲಿರುತ್ತದೆ. |
| 11. | ಕೋಲಾರ | ಗುಟ್ಟಹಳ್ಳಿ /ಬಂಗಾರ ತಿರುಪತಿಗ್ರಾಮ, ಕೆ.ಜಿ.ಎಫ್. ತಾಲ್ಲೂಕು .ಸ.ನ.59 ರಲ್ಲಿ 19.60 ಎಕರೆ | 19.60 | ಜಮೀನು ಹಸ್ತಾಂತರಿಸುವ ಪ್ರಕ್ರಿಯೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಂತಿಮ ಹಂತದಲ್ಲಿರುತ್ತದೆ. |